ಬರಬೇಡ ಎಂಬ ಸೂಚನೆ. ಇದನ್ನು ಓದಲು ಸಂಪಂಗಿ ಮೇಣದ ಬತ್ತಿ ಹಚ್ಚಿದಾನೆ, ಅಷ್ಟೇ."

ಹಾಗೆಂದು ಹೇಳಿ ಕರಮಚಂದ ಜೇಬಿನಿಂದ ಚಿಕ್ಕ ಕೀ ಚೈನ್‌ನಂತಹ ವಸ್ತುವನ್ನು ಹೊರಗೆಳೆದ. ಅದರಲ್ಲಿ ಚಿಕ್ಕ ಚೂರಿ, ಕಟ್ಟಿಂಗ್ ಪ್ಲೇಯರ್, ಮತ್ತು ಅಂತಹ ಅನೇಕ ಸಲಕರಣೆಗಳಿದ್ದವು. ಅದರಲ್ಲಿದ್ದ ಚೂರಿಯಿಂದ ಮೂರನೆಯ ಲಕೋಟೆಯನ್ನು ನಾಜೂಕಾಗಿ ಕತ್ತರಿಸಿ ಅದರಲ್ಲಿದ್ದ ಕಾಗದವನ್ನು ಹೊರಗೆಳೆದು, ಮೇಣದ ಬತ್ತಿಯ ಬೆಳಕಲ್ಲಿ ಹಿಡಿದ. ತುಸು ಹೊತ್ತಿನಲ್ಲಿ ಅದರಲ್ಲಿ ಅಕ್ಷರಗಳು ಕಾಣಿಸಿದವು... 'ಯಾವಾಗ, ಎಲ್ಲಿ ನೀನು ಹೇಳು!'

"ಎರಡನೇ ಪತ್ರದಲ್ಲಿ ಬರಬೇಡ ಎಂಬ ಸೂಚನೆ. ಮೂರನೆಯದರಲ್ಲಿ ಯಾವಾಗ, ಎಲ್ಲಿ ಹೇಳು ಅಂತ ಕೇಳಿದ್ದಾನೆ! ಬಹಳ ವಿಚಿತ್ರವಾಗಿದೆ!" ಕರಮಚಂದ ಸ್ವಗತವೆಂಬಂತೆ ನುಡಿದು, ಆ ಲಕೋಟೆ ಮತ್ತು ಪತ್ರವನ್ನು ತನ್ನ ಜೇಬಿಗೆ ತುರುಕಿದ.

ಕರಮಚಂದ ಮತ್ತೆ ಮನೆಯೊಳಗೆ ಕೂಲಂಕಷವಾಗಿ ಪರಿಶೀಲಿಸಿದ. ಯಾವುದೋ ಹಳೆಯ ಕೆಲವು ದಿನಪತ್ರಿಕೆಗಳು, ಬಟ್ಟೆಗಳನ್ನು ತುಂಬಿಸಿಟ್ಟಿದ್ದ ಚೀಲ, ಇನ್ನು ಕೆಲವು ನಿತ್ಯೋಪಯೋಗಿ ವಸ್ತುಗಳ ಹೊರತಾಗಿ ಬೇರೇನೂ ಗಮನ ಸೆಳೆಯುವ ವಸ್ತುಗಳು ಅಲ್ಲಿ ಕಾಣಿಸಲಿಲ್ಲ. ಪಕ್ಕದ ಮುಚ್ಚಿಗೆಯಿದ್ದ ಚಿಕ್ಕ ಕೋಣೆ ಬೆಚ್ಚಗಿತ್ತು. ಅಲ್ಲಿ ಅಸ್ತವ್ಯಸ್ತವಾಗಿದ್ದ ಹಾಸಿಗೆಯಿತ್ತು. ಗೋಡೆಯ ಕೊಕ್ಕೆಯಲ್ಲಿ ನೇತಾಡುವ ಉಡುಪುಗಳು. ಕರಮಚಂದ ನೆಲದಿಂದ ಮುಚ್ಚಿಗೆಯತನಕ ಪ್ರತೀ ಅಂಗುಲ ಅಂಗುಲವನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದ. ಆತನ ಮುಖದಲ್ಲಿ ಸಂತೃಪ್ತಿಯ ಕಳೆ ಕಂಡಿತು.

"ಹೊನ್ನರಾಜು, ಸಂಪಂಗಿ ಇಲ್ಲಿಗೆ ಬಾಡಿಗೆಗೆ ಬಂದು ಮೂರು ತಿಂಗಳು ಆಯಿತಲ್ವೆ?"

"ನಿಮ್ಮ ಊಹೆ ಬಹುತೇಕ ಸರಿ. ಎರಡೂವರೆ ತಿಂಗಳಾಯಿತು."

"ಸರಿ, ನಾವಿನ್ನು ಹೊರಡುವ. ನೀವು ಬಂದ ದಾರಿಯಲ್ಲೇ ಹೋಗಿ. ನಾನು ಒಳಗಿನಿಂದ ಅಗಳಿ ಹಾಕಿ, ಮಾಡಿನ ಮೂಲಕವೇ ಹೊರ ಬರುತ್ತೇನೆ." ಕರಮಚಂದ ಸೂಚಿಸಿದ.

ನಾವು ಹೊರಗೆ ಬಂದಾಗ ನಾನೊಂದು ವಿಚಿತ್ರ ಗಮನಿಸಿದೆ. ಪಕ್ಕದ ಪೊದೆಯಲ್ಲಿ ಏನೋ ಸರಿದಂತೆ ಆಯಿತು. ಕತ್ತು ಹೊರಳಿಸಿ ನೋಡಿದಾಗ, ವ್ಯಕ್ತಿಯೊಬ್ಬ ಚಕ್ಕನೆ ಗಿಡಗಳೆಡೆಯಲ್ಲಿ ಮರೆಯಾದ. ಆದರೂ ತಲೆಗೆ ಸುತ್ತಿದ ಕೆಂಪು ಬಣ್ಣದ ರುಮಾಲು ಕಣ್ಣು ರಾಚಿತು! ಅದನ್ನ ಕೆಲ ಕ್ಷಣಗಳ ಹಿಂದೆಯಷ್ಟೇ ಕಂಡಿದ್ದೆ... ಮುತ್ತಪ್ಪನ ತಲೆಯಲ್ಲಿ!

ಬೊಳ್ಳಮ್ಮ ಬಿಸಿ ಬಿಸಿ ಹಬೆಯಾಡುವ ಕಾಫಿ ತಂದಿರಿಸಿದಳು. ನಾವು ಅದನ್ನು ಸವಿಯುವಾಗ ಯಾರೋ ಗೊಬ್ಬರ ಸರಬರಾಜು ಮಾಡುವವರು ಬಂದಿದ್ದಾರೆಂದು ಅವರ ಜೊತೆ ಮಾತಾಡಲು ಹೊನ್ನರಾಜು ಹೊರಗೆ ಹೋದ. ನಾವು ಓಂಕಾರಪ್ಪ ಮತ್ತು ಬೊಳ್ಳಮ್ಮನೊಡನೆ ಸಂಭಾಷಣೆಗೆ ತೊಡಗಿದೆವು. ಕರಮಚಂದನ ಪ್ರಶ್ನೆಯೊಂದಕ್ಕೆ ಓಂಕಾರಪ್ಪ ಪ್ರತಿಕ್ರಿಯಿಸಿದ,

"ಸಂಪಂಗಿ ಇರುವ ಆ ಮನೆ ಪಾಳು ಬಿದ್ದಂತಿತ್ತು. ಅಲ್ಲಿ ಯಾರೂ ಇರ್ತಿರಲಿಲ್ಲ. ಬಾಡಿಗೆಗೆ ಬರುವ ಮುನ್ನವೇ ಒಂದೆರಡು ಬಾರಿ ರಾತ್ರಿ ಹೊತ್ತಲ್ಲಿ ನಾನು ಸಂಪಂಗಿಯನ್ನ ಅಲ್ಲಿ ಕಂಡಿದ್ದೆ. ನನ್ನನ್ನು ನೋಡ್ದ ತಕ್ಷಣ ಓಡಿ ಹೋಗಿದ್ದ. ಮುತ್ತಪ್ಪನಿಗೆ ಸಂಪಂಗಿಯ ಪರಿಚಯ ಮೊದ್ಲೇ ಇರ್ಬೇಕು ಅಂತ ಅನ್ಸುತ್ತೆ. ಅವರಿಬ್ಬರು ಜೊತೆಯಾಗಿದ್ದನ್ನು ನಾನು ಕಂಡಿದ್ದೇನೆ. ಅದು ಸಂಪಂಗಿ ಇಲ್ಲಿಗೆ ಬಾಡಿಗೆಗೆ ಬರುವ ಕೆಲ ದಿನಗಳ ಹಿಂದೆ. ಅವರಿಬ್ಬರೂ ಎಸ್ಟೇಟಿನ ಆ ತುದಿಯಲ್ಲಿ ಜೊತೆಗಿದ್ದರು. ಯಜಮಾನರ ಹತ್ರ ಸಂಪಂಗಿ ತನ್ಗೆ ಪರಿಚಯ ಅಂತ ಹೇಳಿ ಬಾಡಿಗೆ ಮನೆ ಕೊಡ್ಸುವ ಹಾಗ್ ಮಾಡಿದ್ದ. ಆದ್ರೆ ಆಮೇಲೆ ಅವರ ನಡುವೆ ಜಗಳ ಆಗಿದೆ."